**ಓ.ಎಸ್.ನಂಬ್ರ:387 /2023 ಪಿ.ಡಬ್ಲ್ಯೂ :1**

ದಿನಾಂಕಃ 01-10-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ವಾಟಿ ಸವಾಲುಃ ಶ್ರೀಮತಿ ಎಸ್.ಹೆಚ್. ವಕೀಲರಿಂದ**

ದಿಃ 15-02-1993 ರಂದು 15 ಲಕ್ಷ ರೂಪಾಯಿ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಹದಿಮೂರು ವರೆ ಲಕ್ಷಕ್ಕೆ ಸಾಲವನ್ನು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇ ನಂಬ 8/7ಬಿ ರಲ್ಲಿ 28 ಸೆಂಟ್ಸ ಎಂದು ಕಂಡುಬರುತ್ತದೆ ಎಂದರೆ ಸರಿ. ಆರ್ ಟಿ ಸಿ ಯಲ್ಲಿ ಕೂಡಾ 28 ಸೆಂಟ್ಸ ಕಂಡುಬರುತ್ತದೆ ಎಂದರೆ ಸರಿ. ಅದರಲ್ಲಿ 12 ಸೆಂಟ್ಸ ಭೂ ಪರಿವರ್ತನೆಯಾಗಿದೆ ಎಂದರೆ ಸರಿ. ಸದರಿ ಸ್ಥಳ ರಾಷ್ಟೀಯ ಹೆದ್ದಾರಿಯಿಂದ 45 ಮೀ ಒಳಗಡೆ ಬರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಬರುತ್ತದೆ ಎಂದು ನುಡಿಯುತ್ತಾರೆ. ಆ ಕಾರಣದಿಂದ 12 ಸೆಂಟ್ಸ ಜಾಗ ಮಾತ್ರ ಭೂ ಪರಿವರ್ತನೆಯಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಮೂಲ ಪ್ರತಿಯನ್ನು ಕೆ ಎಸ್ ಎಫ್ ಸಿ ಗೆ ನೀಡಿದ್ದೇನೆ ಎಂದರೆ ಸರಿ. ನಾನು ನೀಡಿದ ಎಲ್ಲಾ ದಾಖಲೆಗಳಲ್ಲಿ ಒಟ್ಟು ವಿಸ್ತೀರ್ಣ 27 ಸೆಂಟ್ಸ ಎಂದು ನಮೂದಾಗಿದೆ ಎಂದರೆ ಸರಿ. ನಾನು ಸಾಲದ ಕರಾರು ಪತ್ರ ಹಾಗು ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳಿಗೆ ಕೆ ಎಸ್ ಎಫ್ ಸಿ ಅಧಿಕಾರಿಗಳ ಸಮಕ್ಷಮ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಸಾಲಕ್ಕೆ ಕೆ.ಆರ್.ಪ್ರೇಮ ಚಂದ್ರ, ಅನುಪಮ ಪ್ರೇಮ ಚಂದ್ರ ಮತ್ತು ಸುಕುಮಾರ ಇವರಿಗೆ personal guarantee ನೀಡಿದ್ದೇನೆ ಎಂದರೆ ಸರಿ. 12 ಸೆಂಟ್ಸ ಸ್ಥಳವನ್ನು ಅಡಮಾನ ಮಾಡಿರುವ ಬಗ್ಗೆ ದಾಖಲೆಗಳು ಇದೆ ಎಂದರೆ ಸಾಕ್ಷಿಯು ಅಡಮಾನ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಕೆ ಎಸ್ ಎಫ್ ಸಿ ಗೆ ನೀಡಿರುವ ಎಲ್ಲಾ ದಾಖಲೆಗಳಲ್ಲಿ 25 ಸೆಂಟ್ಸ ಜಾಗವನ್ನು ಬರೆದುಕೊಟ್ಟಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಸಾಲವನ್ನು ಮರುಪಾವತಿ ಮಾಡದೇ ಇರುವ ಕಾರಣ ನನಗೆ ಎರಡನೇ ಪ್ರತಿವಾದಿ ಅನೇಕ ಬಾರಿ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಸಾಲದ ಹಣವನ್ನು ಮರುಪಾವತಿ ಮಾಡದೇ ಇರುವ ಕಾರಣ ದಿಃ 30-05-2001 ರಂದು ಎರಡನೇ ಪ್ರತಿವಾದಿ ಸ್ಥಳವನ್ನು ಅವರ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಉದಯವಾಣಿ ಪತ್ರಿಕೆಯಲ್ಲಿ ಕೂಡಾ ಮಾರಾಟ ಬಗ್ಗೆ ನೋಟಿಫಿಕೇಶನ್ ಮಾಡಿದ್ದಾರೆ ಎಂದರೆ ಸಾಕ್ಷಿಯು 12 ಸೆಂಟ್ಸ ಸ್ಥಳಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 06-02-2008 ರಂದು 27 ಸೆಂಟ್ಸ ಜಾಗಕ್ಕೆ ಕೊನೆಯದಾಗಿ ನೋಟೀಫಿಕೇಶನ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ನೋಟೀಫಿಕೇಶನ್ ಪ್ರಕಾರ 3ನೇ ಪ್ರತಿವಾದಿ 27 ಸೆಂಟ್ಸ ಸ್ಥಳವನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿ ಖರೀದಿ ಮಾಡಿರುವುದು 3 ತಿಂಗಳ ನಂತರ ನನಗೆ ಗೊತ್ತಾಗಿರುತ್ತದೆ. ದಿಃ 26-

02-2008 ರಂದು ಎರಡನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಕಾನೂನು ಬದ್ದ ಕ್ರಯ ಪತ್ರವನ್ನು ಬರೆದುಕೊಟ್ಟಿರುವುದು ನನಗೆ ಗೊತ್ತಿದೆ. ಅದರ ವಿರುದ್ದ ನಾನು ನ್ಯಾಯಾಲಯಕ್ಕೆ ರಿಟ್ ಪಿಟೀಶನ್ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಕ್ರಯ ಸಾಧನದ ನೊಂದಣಿಯಾಗುವಾಗ ರಿಟ್ ಪಿಟೀಶನ್ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ರಿಟಿ ಪಿಟೀಶನ್ ಅರ್ಜಿ ವಜಾ ಆಗಿದೆ ಎಂದರೆ ಸರಿ. ಮಾರಾಟ ಕ್ರಮ ಬದ್ದವಾಗಿದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಕೆ ಆರ್ ಪ್ರೇಮ ಚಂದ್ರ, ಅನುಪಮ ಪ್ರೇಮ ಚಂದ್ರ ಮತ್ತು ಸುಕುಮಾರ ಇವರ personal guarantee ಮೇಲೆ ಕೂಡಾ ಉಡುಪಿಯಲ್ಲಿ ಡಿಕ್ರಿಯಾಗಿದೆ ಎಂದರೆ ಸರಿ. 15 ಸೆಂಟ್ಸ ಸ್ಥಳ ರೋಡ್ ಮಾರ್ಜಿನ್ ಸ್ಥಳ ಎಂದರೆ ಸರಿಯಲ್ಲ. 24 ಕೋಟಿಯ 47 ಲಕ್ಷದ 70 ಸಾವಿರದ 61 ರೂಪಾಯಿಗಳು ಹಣ ಎರಡನೇ ಪ್ರತಿವಾದಿಗೆ ಬರಲು ಬಾಕಿ ಇದೆ ಎಂದರೆ ಸರಿಯಲ್ಲ. 11 ವರ್ಷ ನಾನು ಕೇಸನ್ನು ನಡೆಸದೆ ಪ್ರತಿವಾದಿಯ ಸಮಯವನ್ನು ವ್ಯರ್ಥಮಾಡದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾವೆ ಸಂಪೂರ್ಣ ಸುಳ್ಳು ದಾವೆ ಎಂದರೆ ಸರಿಯಲ್ಲ. ನಾನು ಒಂದು ಮತ್ತು ಎರಡನೇ ಪ್ರತಿವಾದಿಗೆ ಖರ್ಚನ್ನು ನೀಡಬೇಕು ಎಂದರೆ ಸರಿಯಲ್ಲ.

**ವಾಟಿ ಸವಾಲುಃ ಶ್ರೀ ಎಮ್.ಎಸ್.ಎಸ್. ವಕೀಲರಿಂದ**

ನಾನು ಸಾಲ ಪಡೆದುಕೊಂಡು ಮಾರ್ಟಗೇಜ್ ಮಾಡುವಾಗ ಜಾಗದ ಸಂಪೂರ್ಣ ಹಕ್ಕುದಾರನಾಗಿದ್ದೆ ಎಂದರೆ ಸರಿ. ಕರ್ನಾಟಕ ಭೂ ಸುಧಾರಣಾ ವಿಧಿಗೂ ಹಾಗು ನಾನು ಬರೆದುಕೊಟ್ಟಿರುವ ಅಡವು ದಸ್ತಾವೇಜಿಗೆ ವಿರೋದವಾಗಿದೆ ಎಂದರೆ ಸರಿಯಲ್ಲ. ನಾನು ಬರೆದುಕೊಟ್ಟಿರುವ 27 ಸೆಂಟ್ಸ ಜಾಗದ ಬಾಬ್ತು ಮಾರ್ಟಗೇಜ್ ಡೀಡ್ ಕಾನೂನು ಬದ್ದವಾಗಿದೆ ಎಂದರೆ ಸಾಕ್ಷಿಯು ಮಾರ್ಟಗೇಜ್ ಡೀಡ್ ಬರೆದುಕೊಟ್ಟಿರವುದಿಲ್ಲ ಎಂದು ನುಡಿಯುತ್ತಾರೆ. ನಾನು 27 ಸೆಂಟ್ಸ ಜಾಗದ ಮೇಲೆ ಎರಡನೇ ಪ್ರತಿವಾದಿ charge create ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ದಿನಪತ್ರಿಕೆಯಲ್ಲಿ ಮಾತ್ರ 27 ಎಂದು ಬರೆಯುವ ಬದಲು 12 ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಮೂರನೇ ಪ್ರತಿವಾದಿ ಹೈಎಸ್ಟ್ ಬಿಡ್ಡರ್ ಆದ ಕಾರಣ ಸೇಲನ್ನು ಅವರಿಗೆ ಕನ್‌ಫರ್ಮ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ commercial tax ನ dues ನ್ನು ಮೂರನೇ ಪ್ರತಿವಾದಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 03-10-2009 ರಂದು 3 ನೇ ಪ್ರತಿವಾದಿಯ ಹೆಸರಿಗೆ ಕಾನುನು ಬದ್ದವಾಗಿ ಕ್ರಯ ಪತ್ರವನ್ನು ನೊಂದಾಯಿಸಲಾಗಿದೆ ಎಂದರೆ ಸರಿಯಲ್ಲ. ದಿಃ 06-06-2009 ರಂದು 3 ನೇ ಪ್ರತಿವಾದಿ ಸ್ವಾಧೀಪಡಿಸಿಕೊಂಡು, ಅಭಿವೃದ್ದಿ ಪಡಿಸಿ ಇಲ್ಲಿಯವರೆಗೂ ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಆರ್ ಟಿ ಸಿ ಮತ್ತು ಎಮ್ ಆರ್ 3 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿದೆ ಎಂದರೆ

ಸಾಕ್ಷಿಯು ಕ್ಲಾಸ್ ಬರೆದು ಬದಲಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ತುಂಬಾ ಹಣ ಖರ್ಚು ಮಾಡಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಗೆ ತುಂಬಾ ಹಿಂಸೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಅವರಿಂದ ಹಣ ಕಿತ್ತುಕೊಳ್ಳಲು ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದ್ದಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**